Sri SIDDAIAH KASHIMATH.—I beg to move :

"That the Mysore Ministers' Salaries and Allowances (Amendment) Bill, 1967, be taken into consideration,"

Mr. SPEAKER.—Motion moved :

"That the Mysore Ministers' Salaries and Allowances (Amendment) Bill, 1967, be taken into consideration".

(*Sri H. Siddaveerappa entered the Chamber*)

Sri H. SIDDAVEERAPPA.—Sir, I rise to a point of order. This House agreed to the Agenda that is given to us, to meet only up to 12-30. It is already 12-35. No further proceedings can be taken up unless the House assents that this be taken up. It is already 12-35 and the House cannot be said to be sitting according to schedule. Therefore, my point of order is that the House shall stand adjourned by 12-30.

Mr. SPEAKER.—If Members do not know the procedure I will guide them as far as possible. Shall we now adjourn and meet at 3 P.M.?

HON'BLE MEMBERS.—Yes.

Mr. SPEAKER.—The House will now stand adjourned and meet at 3 P.M.

The House adjourned for Recess at Thirty-five Minutes past Twelve of the Clock and reassembled at Three of the Clock.

[MR. SPEAKER in the Chair].

Member's Representation

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ನಾನು ಇವೊತ್ತು ಬೆಳಿಗ್ಗೆ ವ್ಯವಸಾಯದ ವಿಶ್ವವಿದ್ಯಾನಿಲಯಕ್ಕೆ ಸಂಬಧಪಟ್ಟ ವಿಷಯವನ್ನು ತಿಳಿಸಬೇಕೆಂದಿದ್ದೆ, ಆದರೆ ಅದು ಸಾಧ್ಯ ವಾಗಲಲ್ಲ. ಈಗ ತಾವು ಅಪ್ಪಣೆ ಕೊಟ್ಟರೆ ಅದನ್ನು ತಿಳಿಸುತ್ತೇನೆ.

ಅಧ್ಯಕ್ಷರು.—ಈಗ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಲ್ಲ. ಅವರು ಇದ್ದಾಗ ಈ ವಿಷಯ ವನ್ನು ಹೇಳಿದ್ದರೆ ಚೆನ್ನಾಗಿತ್ತು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಂಬಂಧಪಟ್ಟ ಮಂತ್ರಿಗಳು ಯಾವಗ ಬರುತ್ತಾರೆಯೋ ಅಥವಾ ಬರುವುದಿಲ್ಲವೋ ಅದು ನಮಗೆ ಗೊತ್ತಾಗುವುದಿಲ್ಲ. ಈ ಮೈಸೂರಿನಲ್ಲಿರತಕ್ಕ ವ್ಯವಸಾಯದ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಹಾಗೆ ವಿದ್ಯಾರ್ಥಿಗಳಿಗೆ ಸೀಟು ಹಂಚಿಕೆ ಆಗುವಾಗ ಮೆರಿಟ್ ಮೇಲೆ ಸೀಟು ಕೊಡುವ ಪದ್ಧತಿ ಇತ್ತು. ಮೆರಿಟ್‌ಮೇಲೆ ಸೀಟು ಕೊಡುವ ಪದ್ಧತಿಯನ್ನು ಈ ವರ್ಷ ಸ್ವಲ್ಪ ಬದರಾಯಿಸಬೇಕು ಎಂದು ಹೇಳಿ ಕೆಲವರ ಅಭಿಪ್ರಾಯ ಇದೆ ಎಂದು ನಾನು ಕೇಳಿದೆ. ಮುಖ್ಯಮಂತ್ರಿಗಳು ಈ ವಿಶ್ವವಿದ್ಯಾ ನಿಲಯದ ಉಪಕುಲಪತಿಗಳನ್ನು ಬರಮಾಡಿಕೊಂಡು ಈಗ ಸೀಟು ಹಂಚಿಕೆ ಮಾಡತಕ್ಕ ವ್ಯವಸ್ಥೆ ಸರಿಯಾಗಿಲ್ಲ, ಬೇರೆ ರೀತಿ ಮಾಡಬೇಕು, ಹಾಗೆಂದು ಹೇಳಿ ಅದನ್ನು

ಅಕೆಡಮಿಕ್ ಕೌನ್ಸಿಲ್‌ನಲ್ಲಿ ಬೋರ್ಡ್ ಆಫ್ ರೀಜೆಂಟ್ಸ್‌ನಲ್ಲಿ ಇಟ್ಟು ಯಾವ ರೀತಿ ಮಾಡಬೇಕೆಂಬುದನ್ನು ತಿಳಿಸಿದಮೇಲೆ ಅಕೆಡೆಮಿಕ್ ಕೌನ್ಸಿಲ್‌ನವರು ಒಂದು ಸಭೆಯನ್ನು ನಡೆಸಿದ್ದಾರೆ. ಆಮೇಲೆ ಅಕೆಡೆಮಿಕ್ ಕೌನ್ಸಿಲ್ ನವರು ಜುಲೈ 28 ನೇ ತಾರೀಕು ಸಭೆ ಸೇರಿ ಈ ವ್ಯವಸಾಯದ ವಿಶ್ವವಿದ್ಯಾನಿಲಯದಲ್ಲಿ ಸೀಟಿನ ಹಂಚಿಕೆ ಯಾವರೀತಿ ಆಗಬೇಕೆಂಬ ವಿಷಯದಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡು, ಅವರು ಬೋರ್ಡ್ ಆಫ್ ರೀಜೆಂಟ್ಸ್‌ಗೆ ಒಂದು ಸರ್ಕ್ಯುಲರ್ ಮುಖಾಂತರ ತಮ್ಮ ತೀರ್ಮಾನವನ್ನು ಕಳುಹಿಸಿಕೊಟ್ಟು, ಅದರ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಇಂತಿಷ್ಟು ದಿವಸಗಳಲ್ಲಿ ಕಳುಹಿಸದೇ ಹೋದರೆ ಇದಕ್ಕೆ ನೀವು ಒಪ್ಪಿಕೊಂಡಿದ್ದೀರಿ ಎಂದು ನಾವು ತೆಗೆದುಕೊಳ್ಳಬೇಕಾಗುತ್ತದೆ ಎನ್ನುವ ತೀರ್ಮಾನವನ್ನು ಕಳುಹಿಸಿಕೊಟ್ಟಿದ್ದಾರೆ. ಆತುರ ಆತುರವಾಗಿ ಈಗ ನಡೆಯುತ್ತಾ ಇರತಕ್ಕಂಥ ಪದ್ಧತಿಯನ್ನು ಬದಲಾವಣೆ ಮಾಡಿ ಹೊಸಪದ್ಧತಿಯನ್ನು ತರುವುದಕ್ಕೆ ಪ್ರಯತ್ನ ನಡೆದಿದೆ. ಈ ವಿಶ್ವವಿದ್ಯಾನಿಲಯದಲ್ಲಿರತಕ್ಕ 240 ಸೀಟುಗಳನ್ನು ಹಂಚಿದಮೇಲೆ ಕೆಲವು ಡಿಸ್ಟ್ರಿಕ್ಟ್‌ಗಳಿಗೆ ಸಾಕಷ್ಟು ಸೀಟುಗಳು ಸಿಕ್ಕಿಲ್ಲ ಎಂದು ಹೊಸದಾಗಿ 60 ಸೀಟುಗಳನ್ನು ಕೊಟ್ಟು, ಆ 60 ಸೀಟು ಗಳನ್ನು ಯಾವ ಡಿಸ್ಟ್ರಿಕ್ಟ್‌ಗೆ ಕಡಿಮೆ ಬಂದಿದೆಯೋ ಅವರಿಗೆ ಕೊಡಬೇಕು ಎಂದು ಒಂದು ತೀರ್ಮಾನ ಮಾಡಿದ್ದಾರೆ. ಆ ರೀತಿ ಮಾಡುವುದರಿಂದ ಅವರಿಗೆ ಅನುಕೂಲವಾಗುತ್ತದೆ.

Mr. SPEAKER.—I thought that the letter addressed to me in this connection might have gone to the Minister concerned. But, it is still with the hon'ble member who addressed it. I am passing it on to the Minister. Somebody, on behalf of the Government might kindly find out what it is since the concerned Minister is not here. To facilitate discussion, some information is necessary.

Let us try honestly. I thought that that paper had been sent away. I was also under the impression that the Education Minister was concerned, but now I am told that it is the Chief Minister who is concerned.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಮುಖ್ಯವಾದಂತಹ ಅಂಶವೇನೆಂದರೆ, ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿದ್ದಾರೆ. ಅನೇಕ ಸ್ಥಳಗಳಲ್ಲಿ ಮಾನ್ಯ ಮುಖ್ಯಮಂತ್ರಿಯವರು ಹಾಗೂ ಉಳಿದ ಮಂತ್ರಿಗಳು ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲವೆಂದು ಸಾರಿ ಸಾರಿ ಹೇಳಿದ್ದರೂ ಇದನ್ನು ಮಾಡಿದ್ದಾರೆ—ಇದು ಒಂದನೇ ತಪ್ಪು. ಎರಡನೆಯದು, ಭಾವೈಕ್ಯತೆ ಉಂಟುಮಾಡುತ್ತೇವೆಂದು ಹೇಳುತ್ತಾ, ಕೆಲವು ಜಿಲ್ಲೆಗಳಿಗೆ ಕಡಿಮೆಯಾಯಿತು, ಎಂದು ಹೇಳಿ ಅದರ ನೆಪದಲ್ಲಿ ಇದನ್ನು ಮಾಡಿದ್ದಾರೆ. ಅದಲ್ಲದೆ, ತಮ್ಮ ಅಧಿಕಾರವನ್ನು ಬೋರ್ಡಿನ ಮೇಲೆ ಚಲಾಯಿಸುವುಬಕ್ಕೆ ಹೋಗಿದ್ದಾರೆ. ಇದರ ಜೊತೆಗೆ, ನಮ್ಮ ರಾಜ್ಯದಲ್ಲಿ ಎಲ್ಲರನ್ನೂ ಸಮತೂಕದಲ್ಲಿ ನೋಡುತ್ತೇವೆಂದು ಅಭಿಪ್ರಾಯವನ್ನು ಹೇಳುತ್ತಾ ಇದನ್ನು ಮಾನ್ಯ ಮುಖ್ಯಮಂತ್ರಿಯವರೇ ಮಾಡುತ್ತಿದ್ದಾರೆ. ಇದು ಒಂದು ಗಾದೆಯ ರೀತಿಯಲ್ಲಿದೆ—ಹೇಳುವುದೆಲ್ಲಾ ವಶಿಷ್ಟನಂತೆ ಮಾಡುವುದೆಲ್ಲಾ ವಿಶ್ವಾಮಿತ್ರನಂತೆ ಆಗಿದೆ. ಇದನ್ನು ತಪ್ಪಿಸುವುದಕ್ಕೋಸ್ಕರ ಒಂದು ಸೌಮ್ಯ ತತ್ವದ ಮೇಲೆ ಈ ಸಭೆಯು ಒಂದು ಸಮಿತಿಯನ್ನು ಏರ್ಪಾಡು ಮಾಡಿ ಎಷ್ಟು ಮಟ್ಟಿಗೆ ಸೀಟುಗಳು ಹಂಚಿಕೆ ಯಾಗಿವೆ, ಇದರಲ್ಲಿ ಎಷ್ಟುಮಟ್ಟಿಗೆ ಸರ್ಕಾರದ ಹಸ್ತಕ್ಷೇಪ ಇದೆ, ಇದನ್ನು ಎಲ್ಲಾ ಸರಿಪಡಿಸುವುದಕ್ಕೆ, ಒಂದು ವರದಿ ತರಿಸಿಕೊಳ್ಳುವುದಕ್ಕೆ ಏರ್ಪಾಡು ಮಾಡುವುದು ಸೂಕ್ತವೆಂದು ನಾನು ಸಲಹೆ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಶ್ರೀ ಹುಚ್ಚಮಾಸ್ತಿಗೌಡರು ಸಭೆಯ ಮುಂದೆ ತಂದಿರತಕ್ಕಂತಹ ವಿಚಾರ ತುಂಬಾ ಗಂಭೀರ ಸ್ವರೂಪದ್ದಾಗಿದೆ. ಮಾನ್ಯ ಮುಖ್ಯಮಂತ್ರಿಯವರು ವ್ಯವಸಾಯ ವಿಶ್ವವಿದ್ಯಾನಿಲಯದ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡಿದ್ದಾರೆ, ಎಂಬುದು ಒಂದು. ಎರಡನೆಯದು ಈ ಬೋರ್ಡ್ ಆಫ್ ರೀಜೆಂಟ್ಸ್‌ಗೆ ಸರ್ಕಾರ ಒಂದು ತೀರ್ಮಾನ ಮಾಡಿಕೊಟ್ಟು, ಅದನ್ನು by circulation ಕಳುಹಿಸಿ ಇಷ್ಟನೇ ತಾರೀಖಿನೊಳಗೆ ತಿಳಿಸಬೇಕು, ಇಲ್ಲದಿದ್ದರೆ, ನೀವು ಅಂಗೀಕರಿಸುತ್ತೀರಿ ಎಂದು ತಿಳಿಯುತ್ತೇವೆ ಎಂದು ಹೇಳಿದ್ದಾರೆ.

ಅಧ್ಯಕ್ಷರು.—ಯಾವಾಗ ಇದು ನಡೆದದ್ದು?

ಶ್ರೀ ಎಸ್. ಗೋಪಾಲಗೌಡ.—ನನ್ನ ಹತ್ತಿರ ತಾರೀಕು ಎಲ್ಲಾ ಇದೆ, ನೋಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಒಂದನೇ ತಾರೀಕಿನೊಳಗೆ ತಿಳಿಸದಿದ್ದರೆ, ನೀವು ಇದಕ್ಕೆ ಒಪ್ಪಿದ್ದೀರಿ ಎಂದು ಭಾವಿಸುತ್ತೇವೆ ಎಂದು ಬರೆದು ತಿಳಿಸಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಸೀಟುಗಳ ಹಂಚಿಕೆಯಲ್ಲಿ ಮೊದಲು ಕೆಲವು ಸೀಟುಗಳನ್ನು ಎಷ್ಟು ಸಂಖ್ಯೆ ಇರಬೇಕೆಂದು ನಿರ್ಧಾರ ಮಾಡಿದರು. ಈ ವಿಷಯದಲ್ಲಿ ಈ ಮನೆಯ ಮುಂದೆ ಕೂಡ ಒಂದು ಸಲ ಅಕ್ಷೇಪಣೆ ಬಂದಿತ್ತು; ಕೆಲವರಿಗೆ ಕೇವಲ ಮೆರಿಟ್ ಮೇಲೆ ಹಂಚಿರುವುದರಿಂದ ಅನ್ಯಾಯವಾಗಬಹುದೆಂದು ಪ್ರಸ್ತಾಪ ಬಂದಿತ್ತು. ಆದಾದ ಮೇಲೆ ಕ್ರಮವಾಗಿ ಹಂಚಬೇಕಾದ ಸೀಟುಗಳನ್ನು ಹಂಚಿ ಆದಮೇಲೆ 60 ಸೀಟುಗಳನ್ನು ಹೆಚ್ಚು ಮಾಡಿರಿ ಎಂದು ಹೇಳಿ, ಅವುಗಳನ್ನು ಇಂಥದೇ ಜಿಲ್ಲೆಗೆ ಕೊಟ್ಟು ಬಿಡಿ ಎಂದು ಹೇಳಿರತಕ್ಕಂತದ್ದು. ಇದೇ ರೀತಿ ಬೇರೆ ಬೇರೆ ಸೀಟುಗಳ ಹಂಚಿಕೆಯಲ್ಲಿಯೂ ಸರ್ಕಾರದ ಕೈವಾಡ ಎಷ್ಟು ಇದೆ, ಇವರು ಏನು ಆಧಾರದ ಮೇಲೆ ಇದನ್ನು ಹಂಚುತ್ತಾರೆ, ಮತ್ತು ಇದನ್ನು ಹೇಗೆ ಸರಿಪಡಿಸಬೇಕೆಂಬುದನ್ನು ನಾವು ಯೋಚನೆ ಮಾಡಬೇಕು. ಮತ್ತು ಈ ವಿಷಯದಲ್ಲಿ ಒಂದು ಸ್ಪಷ್ಟೀಕರಣ ಬೇಕಾಗುತ್ತದೆ. ಆದ್ದರಿಂದ ತಾವು ದಯವಿಟ್ಟು ಹುಚ್ಚಮಾಸ್ತಿಗೌಡರು, ಈ ಮಾನ್ಯ ಸಭೆಯಲ್ಲಿ ಅರಿಕೆ ಮಾಡಿಕೊಂಡಂತೆ, ಇದಕ್ಕೆ ಈ ಮನೆಯ ಒಂದು ಉಪಸಮಿತಿಯನ್ನು ನೇಮಕ ಮಾಡಬೇಕೆಂದು ಏನು ಕೇಳಿಕೊಂಡಿದ್ದಾರೆ, ಅದನ್ನು ತಾವು ವಿಚಾರ ಮಾಡಿ, ಏನಾದರೂ ಅಧಿಕಾರವಿದ್ದರೆ, ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ನನಗೆ ಅಧಿಕಾರ ಮಿತಿ ಎಷ್ಟು ಇದೆ ಎಂದು ಇನ್ನೂ ನೀವು ತಿಳಿದುಕೊಳ್ಳಲಿಲ್ಲವಲ್ಲಾ,

ಶ್ರೀ ಎಸ್. ಗೋಪಾಲಗೌಡ.—ಈಗ ಆಪಾದನೆ ಬಂದಿರುವುದು ಏನೆಂದರೆ, ಸರ್ಕಾರದವರು ಇವತ್ತು ಯೂನಿವರ್ಸಿಟಿಯವರಿಗೆ ಒಂದು ಕಾನೂನನ್ನು ನೃಷ್ಟಿ ಮಾಡಿದ್ದಾರೆ, ಅಧಿಕಾರಗಳನ್ನು ಕೊಟ್ಟಿದ್ದಾರೆ, ಹೇಗೆ ಕೆಲಸಮಾಡಬೇಕು ಎನ್ನುವುದನ್ನು ವಿವರಿಸಿದ್ದಾರೆ. ಆದರೆ ಈಗ ನಡೆದಿರತಕ್ಕ ಹನ್ತಕ್ಷೇಪದಿಂದ ಯೂನಿವರ್ಸಿಟಿಯವರನ್ನು ತಮ್ಮ ಕೈಗೂಸಾಗಿ ಮಾಡಿದ್ದಾರೆ ಎನ್ನುವುದಕ್ಕೆ ಸ್ಪಷ್ಟವಾದ ನಿದರ್ಶನವಿದೆ. ಇಂಥ ಅಕ್ರಮಗಳು ನಡೆದು ಅನ್ಯಾಯವಾಗಿದ್ದರೆ, ಅದನ್ನು ಸರಿಪಡಿಸಬೇಕು. ಈ ರೀತಿಯಿಂದ ಜನರು, ಮುಂದೆ ಒಂದು ಹೇಳಿ, ಹಿಂದುಗಡೆಯಿಂದ ಈ ರೀತಿಯಿಂದ ಹಂಚುಪಿಕೆ ನಡೆಯುತ್ತದೆ ಎಂದು ಹೇಳಿದರೆ ಇದರಿಂದ ಆಯ್ಕೆಗಾರರ ಮೇಲೆ ಒಂದು ಕೆಟ್ಟ ಪರಿಣಾಮವಾಗುತ್ತದೆ; ಮತ್ತು ರಾಜ್ಯದ ಹಿತದೃಷ್ಟಿಯಿಂದ ನೋಡಿದರೆ ಒಂದು ದೃಷ್ಟಿಯಲ್ಲಿ ದ್ರೋಹ ಮಾಡಿದ ಹಾಗೆ ಆಗುತ್ತದೆಂದು ಹೇಳಬಯಸುತ್ತೇನೆ.

Mr. SPEAKER.—The point has been raised that there have been some irregularities or perhaps some wrong orders have been passed or wrong executive action has been taken in the matter of admission into the Agricultural University. I do not at all know anything about it till it was brought before the House. A suggestion was also made that a committee may be appointed by me. I wonder whether there is at all any power vested in the chair to appoint such a committee.

ಶ್ರೀ ಎರ್. ಶ್ರೀಕಂಠಯ್ಯ.—ಸ್ವಾಮಿ, ಈಗ ಆಗಿರತಕ್ಕ ಅನ್ಯಾಯ ಸಾರ್ವಜನಿಕರಿಗಾದರೂ ತಿಳಿಯಲಿ ಎಂದು. ಅಲ್ಲಿ ಏನು ನಡೆದಿದೆ ಎಂಬುವುದನ್ನು ನಾವು ಸಭೆಗೆ ತಿಳಿಸುತ್ತೇವೆ.

ಅಧ್ಯಕ್ಷರು.—ಅದನ್ನು ತಕ್ಕ ಸಮಯಕ್ಕೆ ಹೇಳಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಮಯ ಕಲ್ಪಿಸಿಕೊಟ್ಟಿದ್ದೇವೆ. ತಾವು ಒಂದು ಅವಕಾಶ ಮಾಡಿಕೊಡಿ.

Mr. SPEAKER.—I have allowed one more member Sri Gopala Gowda to speak. If I knew more members would get up, I would not have allowed it all. When the matter comes up, if it is proper, I would allow- I have no particular point in shutting out discussion.

ಶ್ರೀ ಎರ್. ಶ್ರೀಕಂಠಯ್ಯ.—ಇವತ್ತು ಕೊನೆಯ ದಿವಸ ಆಗಿರುವುದರಿಂದ, ಆಗಿರುವ ಅನ್ಯಾಯವನ್ನು ತಿಳಿಸಿಬಿಡೋಣ.

Mr. SPEAKER.—Later on when it is taken up, that will be the proper time for members to participate. They simply mooted the point. If the hon. Member wants, he may put it in writing and send it to me and I will pass it on to the Government and get correct information.

ಶ್ರೀ ವಾಟಾಳ್ ನಾಗರಾಜ್.—ಒಂದು ಪ್ರಾಮುಖ್ಯವಾದ ವಿಷಯವನ್ನು ಹೇಳುತ್ತೇನೆ. ಬೆಂಗಳೂರು ನಗರದಲ್ಲಿ ನೀರಿನ ಸರಬರಾಜನ್ನು ಕಟ್ ಮಾಡುತ್ತಿದ್ದಾರೆ. ಅದರ ಬಗ್ಗೆ ಇನ್ನೂ ಹೋರಾಟ ನಡೆಯುತ್ತಿದೆ. ಉಚಿತ ನೀರನ್ನು ಕೊಡಬೇಕೆ, ಬೇಡವೆ ಎಂಬುದು ಇನ್ನೂ ತೀರ್ಮಾನವಾಗಿಲ್ಲ. ಇವತ್ತಿನ ದಿವಸ ಪ್ರತಿ ಬೀದಿ ಬೀದಿಗೂ ಬಂದು ಒಂದೆರಡು ಮನೆಗಳ ಮೀಟರನ್ನು ಕಟ್ಟು ಮಾಡಿ ಜನರಿಗೆ ನೀರು ಇಲ್ಲದಂತೆ ತೊಂದರೆ ಕೊಡುತ್ತಿದ್ದಾರೆ. 15 ದಿವಸ ಗಳಿಂದ.....

ಅಧ್ಯಕ್ಷರು.—(ವರದಿಗಾರರನ್ನುದ್ದೇಶಿಸಿ) ಏನನ್ನೂ ಬರೆದುಕೊಳ್ಳಬೇಡಿ.

Sri S. SHARAN GOWDA (Jewargi).—I rise to a point of order. The point of order is that two non-official days have been allotted. In those two days we have many business to discuss; we have important resolutions like those which my friend Shri Vatal Nagaraj and Sri Shamanna have just now referred to. The water supply problem to Bangalore City is a very important one. Because of much time taken on the Members Salaries (Amendment) Bill we were not fortunate to discuss these important matters. So members have raised this point for clarification. It is justified. So I request the Chair that either a half hour discussion on this matter should be taken up or a resolution may be allowed to be taken up in this session.

ಶ್ರೀ ಎಸ್. ಗೋಪಾಲಗೌಡ.—ಅವರು ಸಲಹೆ ಮಾಡಿದ್ದು ಸರಿಯಾಗಿದೆ. ಉಚಿತ ನೀರಿನ ಬಗ್ಗೆ ಇನ್ನೂ ಚಳುವಳಿ ನಡೆಯುತ್ತಿದೆ. ನಲ್ಲಿ ನೀರಿನ ಪೈಪನ್ನೇ ಕಟ್ ಮಾಡುತ್ತಿದ್ದಾರೆ. ಈ ರೀತಿ ಮುರ್ಯಾದಸ್ಥ ಸರ್ಕಾರವೂ ಸಹ ಮಾಡುವುದಿಲ್ಲ. ನಾನು ಹೇಳುತ್ತೇನೆ ಇದು " something very criminal on the part of the Government.

ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು ಕೋಟೆ).—ಈ ದಿನದ ಕಾರ್ಯಕ್ರಮದ ಪಟ್ಟಿಯಲ್ಲಿ ಈ ವಿಷಯವೂ ಸಹ ಸೇರಿದೆ. ಈ ದಿನ ಖಾಸಗೀ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಬೇಕೆಂದು ಗೊತ್ತಾಗಿದೆ. ಉಚಿತ ನೀರಿನ ವಿಚಾರವೂ ಸಹ ಈ ದಿನದ ಪಟ್ಟಿಯಲ್ಲಿದೆ. 15—18 ಲಕ್ಷ ಜನರ ಜೀವನಕ್ಕೆ ಸಂಬಂಧಪಟ್ಟ ನೀರಿನ ವಿಷಯವಾದ್ದರಿಂದ.....

ಅಧ್ಯಕ್ಷರು.—ಇದು ಮುಖ್ಯವಾದ ವಿಚಾರವೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಇದರೆ ನಾವು ಅಜೆಂಡಾದ ಪ್ರಕಾರ ಕಾರ್ಯಕಲಾಪಗಳನ್ನು ನಡೆಸಬೇಕು. ಇಲ್ಲದಿದ್ದರೆ ಅಜೆಂಡಾವನ್ನು ಹರಿದು ಹಾಕಬೇಕಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಶ್ರೀ ವಾಟಳ್ ನಾಗರಜ್ ಅವರು ಮತ್ತು ಶ್ರೀ ಶಾಮಣ್ಣನವರು ಬೆಂಗಳೂರಿನ ಉಚಿತ ನೀರಿನ ಬಗ್ಗೆ ಏನು ಹೇಳಿದ್ದಾರೆ ಅದಕ್ಕೆ ಶ್ರೀ ಶರಣಗೌಡರು ಬೆಂಬಲ ಕೊಟ್ಟಿದ್ದಾರೆ. ಆದ್ದರಿಂದ ಆ ವಿಷಯವನ್ನು ಮೊದಲು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಏನಿದ್ದರೂ ನಿಯಮದ ಪ್ರಕಾರ ಹೋಗಬೇಕು.

ಶ್ರೀ ಎಸ್. ಗೋಪಾಲಗೌಡ.—ಎಷ್ಟೋ ಪ್ರಾಮುಖ್ಯವಾದ ವಿಚಾರಗಳಿವೆ. ಅದರಲ್ಲಿ ಉಚಿತ ನೀರಿನ ಬಗ್ಗೆಯೂ ಒಂದು. ಆ ವಿಚಾರವನ್ನು ಈಗ ತೆಗೆದುಕೊಳ್ಳಬೇಕೆಂದು ನೀವು ಹೇಳಿದರೆ ಅದನ್ನು ಮಾನ್ಯ ಸಭೆಯು ಒಪ್ಪುತ್ತದೆ.

———